ಹೆಚ್ಚಾಗಿತ್ತು. ಆಗೆಲ್ಲ ಕೃಷ್ಣ ಮುದುಡಿ ಮೂಲೆಯಲ್ಲಿ ಕುಳಿತುಬಿಡುತ್ತಿದ್ದ. ಪದ್ಮ ಅಸಹನೆಯಿಂದ ಬೇಯುತ್ತಿದ್ದಳು. ಭಾಗಕ್ಕ, "ಹೆಂಡ್ತಿ ಹೋದದ್ದಕ್ಕ ಹಿಂಗಾಗ್ಯಾನ" ಎಂದು ಸಂತೈಸುವದಿತ್ತು. ಆದರೆ, ಶ್ರೀಪತಿರಾಯರ ಆರೋಗ್ಯ ಮಾತ್ರ ಕೈಕೊಟ್ಟು ಎದೆನೋವು ಆರಂಭವಾಯಿತು. ಒಮ್ಮೆ ರಾತ್ರಿಯೆಲ್ಲ ಒದ್ದಾಡಿದ ನಂತರ ಮರುದಿನವೇ ಬೆಳಗಾವಿಯ ಛತ್ರೆಯವರ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಮೂರುತಿಂಗಳವರೆಗೆ ಔಷಧೋಪಚಾರವಾಯಿತು. ಕೆಲವೇ ದಿನಗಳಿದ್ದು ಭಾಗಕ್ಕ ಮನೆಗೆ ಮರಳಿದರೆ ಕೃಷ್ಣ ಮಾತ್ರ ಅವರೊಂದಿಗೇ ಇದ್ದು ಗುಣವಾದ ನಂತರ ಕರೆತಂದಿದ್ದ. ಆಗಲೇ ಪದ್ಮ ಒಡಲಲ್ಲಿ ಸಮೀರನನ್ನು ಹೊತ್ತು ನಿಂತಿದ್ದಳು. ಸಮೀರ ಜನಿಸಿದ ನಂತರ ಮನೆಗೆ ಕಳೆ ಬಂದಿತ್ತು. ತಾತ ಮೊಮ್ಮಗನೊಡನೆ ಆಡುತ್ತ ಆನಂದವಾಗಿದ್ದರು. ಭಾಗಕ್ಕ ಈ ದೃಶ್ಯವನ್ನು ಕಣ್ತುಂಬಿಕೊಳ್ಳುತ್ತಿದ್ದರು. ವಿಠ್ಠಲನಿಗೆ ಬೆಳಗಾವಿಯ ಹುಡುಗಿ ರಕುಮಾಳೊಂದಿಗೆ ಮದುವೆಯಾಯಿತು. ಅವಳು ಕೊಣ್ಣೂರಿನಲ್ಲಿದ್ದದ್ದು ಕಡಿಮೆಯೆ. ವರ್ಗವಾದಲ್ಲಿ ಸುತ್ತುತ್ತ ಹಬ್ಬ, ಹುಣ್ಣಿಮೆಗಳಲ್ಲಿ ವಿಠ್ಠಲನೊಡನೆ ಬಂದು ಹೋಗುತ್ತಿದ್ದಳು.

ಬದುಕಿನ ಬಂಡಿ ನಿರಾಳವಾಗಿ ಸಾಗುತ್ತ ಮತ್ತೆ ವೇಗ ಪಡೆದುಕೊಳ್ಳುತ್ತಿದ್ದುದು ವಿಧಿಗೆ ಸಹಿಸಲಾಗಲಿಲ್ಲ. ಬಂಡಿಯ ಕೀಲೊಂದು ಕಳಚಿಬಿಟ್ಟಿತು. ಹೃದಯಾಘಾತಕ್ಕೆ ತುತ್ತಾದ ಶ್ರೀಪತಿರಾಯರು ಮತ್ತೆ ಮೇಲೇಳಲಿಲ್ಲ. ಭಾಗಕ್ಕನಿಗೆ ದಾರುಣ ದುಃಖ ಒದಗಿತು. ಅವರು ಕೂದಲು ತೆಗೆಸಿ... ಬಿಳಿಸೀರೆಯುಟ್ಟು... ಮಡಿಯಾಗಿ ಶೋಕಿಸುತ್ತ ಕುಳಿತುಬಿಟ್ಟರು. ಪದ್ಮ ಅಡಿಗೆಮನೆ ವಹಿಸಿಕೊಂಡಳು. ಕೃಷ್ಣ ಮನೆಯ ಸೂತ್ರ ಹಿಡಿದ. ಆದರೂ ನೆಪಮಾತ್ರಕ್ಕೆ... ವಾಸಣ್ಣ ಬಂದರೆ ಅವನ ಸದ್ದಡಗುತ್ತಿತ್ತು. ಒಮ್ಮೊಮ್ಮೆ ತರಾಟೆಗೆ ತೆಗೆದುಕೊಳ್ಳುತ್ತ, "ಕುಲಕರ್ಣಿಕಿ ಬ್ಯಾಡಾ. ಹೊಲಮನಿ ಸುದ್ದಿ ಇಲ್ಲಾ. ಬರೇ ಉಂಡು ಹೊಟ್ಟಿ ಬೆಳೆಸಿ ಹೆಣಮಕ್ಕಳ ನಡುವ ಓಡ್ಯಾಡೋದು ಬಿಟ್ಟು ಬ್ಯಾರೇ ಏನೂ ಕಲೀಲಿಲ್ಲ" ಎಂದು ಹಂಗಿಸುತ್ತಿದ್ದ. ಪದ್ಮ ಹನಿಗಣ್ಣಾದರೆ ಭಾಗಕ್ಕ ಇಬ್ಬರು ಮಕ್ಕಳ ನಡುವೆ ಇಕ್ಕುಳದಲ್ಲಿ ಸಿಲುಕಿದವರಂತೆ ಒದ್ದಾಡುತ್ತಿದ್ದರು. ಇಷ್ಟಾದರೂ ಕೃಷ್ಣ ಪದ್ಮಳಿಗೆ ಪ್ರೀತಿಯ ಪತಿ. ಹಳ್ಳಿಮನೆಗಳಲ್ಲಿ ಎಲ್ಲರೆದುರಿಗೆ ಪ್ರೇಮವನ್ನು ಪ್ರದರ್ಶಿಸಲಾದೀತೆ? ಕೃಷ್ಣ ಗೋಕಾಕಕ್ಕೆ ಹೋದಾಗ ಕರದಂಟು... ಬೆಳಗಾವಿಗೆ ಹೋದಾಗ ಕುಂದಾ ತರುತ್ತಿದ್ದ. ಜೊತೆಗೆ ಅವಳ ಪ್ರೀತಿಯ ಮಲ್ಲಿಗೆ ಮಾಲೆ. ಅತ್ತೆ, ಮಾವ ಆಳುಕಾಳುಗಳ ಮುಂದೆ ಅದನ್ನು ಮುಡಿದು ಓಡಾಡಲಾಗುತ್ತಿರಲಿಲ್ಲ. ಅವೆಲ್ಲ ರಾತ್ರಿ ಅವಳ

